# 1 ನೇ ಅಪರ ಸಿ.ಜೆ. ಮತ್ತು ಜೆ ಎಂಎಫ್‌ಸಿ ನ್ಯಾಯಾಲಯ, ಮದ್ದೂರು

**ಸಿ.ಸಿ. 1674/2022**

| | | |
|---|---|---|
| ಸಾಕ್ಷಿಯ ಹೆಸರು | :- | ಜಯಲಕ್ಷ್ಮೀ |
| ಗಂಡನ ಹೆಸರು | :- | ನಾಗರಾಜು |
| ವಯಸ್ಸು | :- | 55 ವರ್ಷ |
| ಉದ್ಯೋಗ | :- | ಗೃಹಿಣಿ |
| ವಾಸಸ್ಥಳ | :- | ಮದ್ದೂರು |

(ಸಾಕ್ಷಿಗೆ ದಿನಾಂಕಃ 18-07-2025 ರಂದು ಪ್ರಮಾಣ ವಚನ ಬೋಧಿಸಲಾಯಿತು)

ಮುಖ್ಯ ವಿಚಾರಣೆಃ

2019 ರಿಂದ ಪಿರ್ಯಿದುದಾರರು ನನಗೆ ಪರಿಚಯವಿದ್ದು, 2019 ರಲ್ಲಿ ಪಿರ್ಯಾದುದಾರರಿಂದ ನಾನು ಒಟ್ಟು 4 ಲಕ್ಷ ಹಣವನ್ನು ಸಾಲವಾಗಿ ತೆಗೆದುಕೊಂಡಿದ್ದು ಸದರೀ ಸಾಲದ ಹಣಕ್ಕೆ ಪ್ರತಿ ತಿಂಗಳು 16 ಸಾವಿರ ರೂ. ಬಡ್ಡಿಯಂತೆ ಪಾವತಿ ಮಾಡುತ್ತಿದ್ದೆ ಆದರೆ ನವೆಂಬರ್ಷ 2020 ರಲ್ಲಿ ಒಂದು ತಿಂಗಳ ಬಡ್ಡಿಯನ್ನು ಪಾವತಿ ಮಾಡಲು ಸಾಧ್ಯವಾಗಿರುವುದಿಲ್ಲ, ಆಗ ಕುಮಾರ್ ರವರು ಮದ್ದೂರು ಪೋಲೀಸ್ ಠಾಣೆಗೆ ದೂರು ನೀಡಿದ್ದು, ಪೋಲೀಸ್ ಠಾಣೆಯಲ್ಲಿ ಕುಮಾರು 5 ವರೆ ಲಕ್ಷ ಹಣವನ್ನು ಕೇಳಿದ್ದರು, ಆದರೆ 4 ಲಕ್ಷದ 70 ಸಾವಿರ ರೂಗಳಿಗೆ ತೀರ್ಮಾನ ಮಾಡಲಾಯಿತು. ಆ ಸಂದರ್ಭದಲ್ಲಿ ಪೋಲೀಸ್ ಠಾಣೆಯಲ್ಲಿ ನನ್ನಿನಂದ 2 ಖಾಲಿ ಚೆಕ್ಕನ್ನು ತೆಗೆದುಕೊಳ್ಳಲಾಯಿತು. ಆದರೆ ನಾನು ಪ್ರತೀ ತಿಂಗಳು 1 ಲಕ್ಷ ಹಣದಂತೆ 4 ಲಕ್ಷ ಹಣ ಮತ್ತು ಕೊನೆಯಲ್ಲಿ 70 ಸಾವಿರ ಹಣವನ್ನು ಪಿರ್ಯಾದುದಾರರಿಡಿಗೆ ಪಾವತಿ ಮಾಡಿದೆ, ತದ ನಂತರ ನಾನು ನೀಡಿದ ಎರಡು ಖಾಲಿ ಚೆಕ್ ನ್ನು ನೀಡುವಂತೆ ನಾನು ಕೇಳಿದ್ದೆ ಸದರೀಯವರು ಹಣ ಪಾವತಿಯಾಗಿದೆ ನಿಮ್ಮ ಚೆಕ್ ನ್ನು ಕೊಡುತ್ತೇನೆಂದು ಹೇಳಿದ್ದರು, ಆದರೆ ಸದರೀ ಚೆಕ್ಕುಗಳನ್ನು ವಾಪಸ್ಸು ಕೊಡದೇ ಕುಮಾರ್ ರವರು ಒಂದು ಚೆಕ್ ನ್ನು 8 ಲಕ್ಷ ರೂ.ಗಳಿಗೆ ಭರ್ತಿ ಮಾಡಿ ಈ ಪ್ರಕರಣವನ್ನು ದಾಖಲು ಮಾಡಿದಲುದ, ಇನ್ನೊಂದು ಚೆಕ್ ನ್ನು ಅವರ ಸ್ನೇಹಿತ ದೇವರಾಜೇಗೌಡ ಎಂಬುವವರ ಮೂಲಕ 3 ಲಕ್ಷ ಹಣವನ್ನು ಭರ್ತಿ ಮಾಡಿ ಪ್ರಕರಣವನ್ನು ದಾಖಲು ಮಾಡಿರುತ್ತಾರೆ. ನಾನು ಪಿರ್ಯಾದುದಾರರಿಗೆ ಯಾವುದೇ ಹಣವನ್ನು ನೀಡಲು ಬಾಕಿ ಇರುವುದಿಲ್ಲ. ಅದರೂ ಸಹ ಪಿರ್ಯಾದುದಾರರು ನನ್ನ ಎರಡು ಚೆಕ್ಕುಗಳನ್ನು

ದುರುಪಯೋಗಪಡಿಸಿಕೊಂಡು ನನ್ನ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲು ಮಾಡಿರುತ್ತಾರೆ ಹಾಗೂ ನಿ,ಪಿ. 4 ಸಹ ನನಗೆ ಜಾರಿಯಾಗಿರುವುದಿಲ್ಲ. ಆದ ಕಾರಣ ನನ್ನನ್ನು ಈ ಪ್ರಕರಣದಿಂದ ಬಿಡುಗಡೆ ಮಾಡಿಕೊಡಲು ಕೇಳಿಕೊಳ್ಳುತ್ತೇನೆ.

**ಪಾಟೀ ಸವಾಲಿಗಾಗಿ ಸಮಯ ಕೋರಿದ್ದು ಸಮಯವಕಾಶ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಒ

1 ನೇ ಅಪರ ಸಿವಿಲ್ ನ್ಯಾಯಾಧೀಶರು,
ಮತ್ತು ಜೆಎಂಎಫ್ ಸಿ, ಮದ್ದೂರು